

ಹಣ ಕೊಟ್ಟು, ಮತ್ತೆ ಆ ಪರ್ಸನ್ನು ಒಳಗೆ ಇಟ್ಟು ಭದ್ರಪಡಿಸಿಕೊಳ್ಳುತ್ತಾರೆ. ಅವರ ಮೇಕಪ್ ಸಾಮಾನುಗಳು ಚಾಕೊಲೇಟು, ಬಾಯಲ್ಲಿ ಇಟ್ಟುಕೊಳ್ಳುವ ಏಲಕ್ಕಿ, ಲವಂಗ, ಪುಟ್ಟ ಕನ್ನಡಿ, ಐಡಿ ಕಾರ್ಡ್‌ಗಳು, ಮಿನಿ ಪುಸ್ತಕ, ಪೆನ್ನು ಜೊತೆಗೆ ಆಸ್ತಿಕರಾದರೆ ಅವರ ರಾಮ ರಕ್ಷಾ ಕವಚ.. ವಿಷ್ಣು ಸಹಸ್ರನಾಮ ಪುಸ್ತಕ ಇತ್ಯಾದಿ... ಏನೇನಿಲ್ಲ, ಅವರ ಚಂದದ ಬ್ಯಾಗಿನಲ್ಲಿ..!

ಈಗ ಹ್ಯಾಂಡ್ ಬ್ಯಾಗ್‌ಗಳು ಅನೇಕ ರೀತಿಯಲ್ಲಿ ಸಿಗುತ್ತದೆ. ರಾಜಸ್ಥಾನಿ ಬ್ಯಾಗು, ದಿಲ್ಲಿ ಬ್ಯಾಗು, ಬೆಂಗಳೂರು, ಚಿತ್ತಾರದ ಬ್ಯಾಗುಗಳು, ಕಸೂತಿ ಹಾಕಿದ ಬ್ಯಾಗ್, ಟು ಇನ್ ವನ್ ಬ್ಯಾಗ್, ಊಟದ ಡಬ್ಬಿಗೊಂದು ಚಂದದ ಲಂಚ್ ಬ್ಯಾಗ್, ಮೇಕಪ್ ಕಿಟ್ ಇಟ್ಟುಕೊಳ್ಳಲೆಂದೇ ಫ್ಯಾಷನಬಲ್ ಬ್ಯಾಗ್.. ನಿಜಕ್ಕೂ ಅದ್ಭುತ.. ನೂರು ರೂಪಾಯಿಯಿಂದ ಹಿಡಿದು, ಸಾವಿರಾರು ರೂಪಾಯಿವರೆಗೂ ಈ ಹ್ಯಾಂಡ್ ಬ್ಯಾಗ್ ಲಭ್ಯ.

ಕೆಲವು ವ್ಯಾನಿಟಿ ಬ್ಯಾಗ್‌ಗಳ ಕ್ವಾಲಿಟಿ, ಲಾಕಿಂಗ್ ಸಿಸ್ಟಂ, ಒಳಗೆ ಲಭ್ಯ ಇರುವ ಅನೇಕ ಬೇರೆ ಬೇರೆ.. ಕಂಪಾರ್ಟ್‌ಮೆಂಟ್‌ಗಳು, ಬೇರೆ ಬೇರೆ ಸ್ಥಳಾವಕಾಶಗಳು, ಬಂಗಾರದಿಂದ ಹೆಣೆದ ಅದರ ಅಂದ ಚಂದ.. ನಿಜಕ್ಕೂ ಎಲ್ಲರ ಕಣ್ಮನ ಸೆಳೆಯುತ್ತದೆ.. ಇಂತಹ ಬ್ಯಾಗುಗಳನ್ನು ಶ್ರೀಮಂತ ಮಹಿಳೆಯರು, ಚಲನಚಿತ್ರ ತಾರೆಯರು, ಸೆಲೆಬ್ರಿಟಿಗಳು ನೇತು ಹಾಕಿಕೊಂಡಿರುವುದನ್ನು ವೈಯ್ಯಾರದಿಂದ ನಡೆಯುವುದನ್ನು ಗಮನಿಸುತ್ತೇವೆ. ಅದರಲ್ಲೂ ಹಿಂದಿ ಚಿತ್ರರಂಗದ ಚಿರ ಯೌವ್ವನೆ ರೇಖಾ, ಹೇಮಮಾಲಿನಿ, ಮಾಧುರಿ ದೀಕ್ಷಿತ್ ಮುಂತಾದವರ ಭುಜಕ್ಕೆ ಹಾಕಿಕೊಳ್ಳುವ ಬ್ಯಾಗುಗಳು ಅಂತೂ ಅವರ ಸೌಂದರ್ಯದ ಜೊತೆಯಲ್ಲಿ ಸ್ಪರ್ಧಿಸುತ್ತಿರುತ್ತದೆ. ಇದನ್ನು ನಮ್ಮ ಕಾಲೇಜು ಕನ್ಯೆಯರು ಚಾಚೂ ತಪ್ಪದೆ ಅನುಕರಿಸುವುದೂ ಇದೆ.

ಕೆಲವು ದುಬಾರಿ ಬ್ಯಾಗ್‌ಗಳಲ್ಲಿ ಒಳಗಡೆ ವಿಶೇಷ ವಿನ್ಯಾಸ ಮಾಡಲಾಗಿರುತ್ತದೆ. ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ , ಮೊಬೈಲ್, ಐಪ್ಯಾಡ್ ಫಾಲ್ಸ್‌ಗಳು, ಪೆನ್ ಡ್ರೈವ್ , ಕಾರು ಸ್ಕೂಟರಿನ ಬೀಗದ ಕೈಗಳನ್ನು ಇಡಲು ವಿಶೇಷವಾದ ಅನುಕೂಲಗಳನ್ನು ಮಾಡಿರುತ್ತಾರೆ. ಈಗಂತೂ ಗಿಫ್ಟ್ ಐಟಂ ಆಗಿಯೂ ಮದುವೆ, ಮುಂಜಿಗಳಲ್ಲಿ ಅನೇಕ ಬಗೆಯ ಬ್ಯಾಗುಗಳನ್ನು ಉಡುಗೊರೆಯಾಗಿ ನೀಡುತ್ತಿದ್ದಾರೆ. ತಮ್ಮಗಳ ಹತ್ತಿರ ಎಷ್ಟೇ ಹ್ಯಾಂಡ್ ಬ್ಯಾಗ್‌ಗಳಿದ್ದರೂ.. ಮಹಿಳೆಯರಿಗೆ ಹೀಗೆ ಕಾಣಿಕೆ ನೀಡಿದಂತಹ ಬ್ಯಾಗ್‌ಗಳನ್ನು ಕಂಡರೆ ಖುಷಿಯೋ ಖುಷಿ.

## ಹತ್ತಾರು ವೈವಿಧ್ಯ

ಈಗ ಒಬ್ಬ ಸಾಮಾನ್ಯ ಮಹಿಳೆಯ ಹತ್ತಿರವೂ ನಾಲ್ಕಾರು ಹ್ಯಾಂಡ್‌ಬ್ಯಾಗಗಳು, ಮನಿ ಪರ್ಸ್‌ಗಳು ಇದ್ದೇ ಇರುತ್ತವೆ. ಮಹಿಳೆಯರು ಯಾವುದೇ ಗಿಫ್ಟ್ ಸೆಂಟರ್‌ಗೆ ಹೋದರೂ ಕೂಡ ಅವರ ಕಣ್ಣು, ನಾನಾ ವಿನ್ಯಾಸಗಳಲ್ಲಿ ನೇತು ಹಾಕಿರುವ ಹ್ಯಾಂಡ್ ಬ್ಯಾಗ್‌ಗಳ ಮೇಲೇ ಇರುತ್ತದೆ. ಹುಡುಗಿಯರಿಂದ ಹಿಡಿದು, ವಯಸ್ಸಾದ ಮಹಿಳೆಯವರೆಗೂ ಭುಜಕ್ಕೆ ಹ್ಯಾಂಡ್ ಬ್ಯಾಗ್ ಹಾಕಿಕೊಳ್ಳದೆ ಹೊರಗೆ ಹೊರಡಲು ಆಗುವುದೇ ಇಲ್ಲ. ಆಯಾ ಪ್ರಾಂತ್ಯಕ್ಕೆ ತಕ್ಕಂತೆ ಈ ಹ್ಯಾಂಡ್ ಭಾಗಗಳ ವಿನ್ಯಾಸವಿರುತ್ತದೆ.

ರಾಜಸ್ಥಾನ, ಕಾಶ್ಮೀರ, ದಿಲ್ಲಿ, ಪಂಜಾಬ್, ಹಿಮಾಚಲ ಪ್ರದೇಶ, ಅಲ್ಲಿಯ ಬೆಟ್ಟ ಗುಡ್ಡಗಳು.. ಇತ್ಯಾದಿ ಪ್ರದೇಶಗಳಲ್ಲಿ ತರತರಹದ ನಮೂನೆಯ ಹ್ಯಾಂಡ್ ಬ್ಯಾಗ್‌ಗಳನ್ನು ನೋಡಬಹುದು. ಇದನ್ನು ಅವರು 'ಬಟುವ' ಎಂದು ಕರೆಯುತ್ತಾರೆ.. ಬಟುವ ಎಂದರೆ, ಹಿಂದಿಯಲ್ಲಿ ಬ್ಯಾಗು ಎಂದು ಅರ್ಥ.. ಒಟ್ಟಿನಲ್ಲಿ ಮಹಿಳೆಯರು ಸುಂದರವಾಗಿ ಡ್ರೆಸ್ ಮಾಡಿಕೊಂಡು, ಕೈನಲ್ಲಿ ಅಂದ ಚಂದದ ಬ್ಯಾಗ್ ನೇತು ಹಾಕಿಕೊಂಡು ಹೊರಟರೆ, ಅದೆಷ್ಟು ಸೊಗಸಾಗಿ ಆಕರ್ಷಕವಾಗಿ , ಕಂಡು ಬರುತ್ತಾರೆಂದರೆ ನೋಡಿದವರ ಕಣ್ಣಿಗೆ ಹಬ್ಬ! ಒಂದು ದಿವಸ ಕೈಚೀಲ ಮರೆತರೂ ಭಣ ಭಣ ಎನ್ನುವ ಹಾಗೆ ಭಾಸವಾಗುತ್ತದೆ. ಈ ಹ್ಯಾಂಡ್ ಬ್ಯಾಗ್ ಈಗ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲೂ ತನ್ನ ಸ್ಥಾನಮಾನವನ್ನು ಭದ್ರ ಮಾಡಿಕೊಂಡು, ಹೆಸರು ಗೌರವವನ್ನು ಸಂಪಾದಿಸಿಕೊಂಡು ಮೆರೆಯುತ್ತಿರುವುದಂತು ನಿತ್ಯ ಸತ್ಯ!